ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯುಕ್ತರ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುವ ಬಗ್ಗೆ.

ಳ ಶ್ರೀ ಗೋವಿಂದ ಪಿ. ಒಡೆಯರಾಜ (ಕಮಲಾಪುರ).—ಸಮಾಜ ಕಲ್ಯಾಣ ರಾಜ್ಯಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯುಕ್ತರು ಇತ್ತೀಚೆಗೆ ಕಳುಹಿಸಿದ ಶಿಫಾರಸ್ಸು ವರದಿಯನ್ನು ಸರ್ಕಾರವು ಒಪ್ಪಿಕೊಂಡಿದಿಯೆ;

ಆ) ಹಾಗಾದರೆ, ಯಾವಾಗ ಮತ್ತು ಇದರ ಪರಿಣಾಮಗಳೇನು,

ಇ) ಹಾಗಿಲ್ಲದಿದ್ದರೆ, ಒಪ್ಪದೇ ಇರಲು ಕಾರಣಗಳೇನು?

ಶ್ರೀ ರಾಜವರ್ಧನ (ಸಮಾಜ ಕಲ್ಯಾಣ ರಾಜ್ಯ ಸಚಿವರು).—

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯುಕ್ತರು ಇಲ್ಲಿ ಶಿಫಾರಸ್ಸುಗಳನ್ನು ಕಳುಹಿಸಿರುವರು. ಈ ಬಗ್ಗೆ ಬೇರೆ ಬೇರೆ ಇಲಾಖೆಗಳಿಂದ, ಈ ವಿಷಯದಲ್ಲಿ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಕೇಳಲಾಗಿದೆ. ಕೆಲವು ಇಲಾಖೆಗಳಿಂದ ಉತ್ತರಗಳನ್ನು ನಿರೀಕ್ಷಿಸಲಾಗಿದೆ.

ಆ) 'ಅ' ದಲ್ಲಿ ತಿಳಿಸಿದ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 'ಆ' ದಲ್ಲಿ ತಿಳಿಸಿದ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಳನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೊಸಕಾನೂನು ಜಾರಿಗೆ ಬಂದಮೇಲೆ ಉತ್ತರವನ್ನು ಇಲ್ಲಿ ಯಾವ ರೀತಿ ಕೊಡಬೇಕೆಂಬುದನ್ನು ತಾವು ಮಾನ್ಯ ಮಂತ್ರಿಗಳಿಗೆ ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಈ ಬಗ್ಗೆ ತಾವು 2—3 ದಿವಸಗಳ ಕಾಲ ಟ್ರೈನಿಂಗ್ ಕೊಡುವುದು ಒಳ್ಳೆಯದು.

ಶ್ರೀ ಎಸ್.ಆರ್. ಬೊಮ್ಮಾಯಿ,—ಹೊಸಬರಿಗೆ ಟ್ರೈನಿಂಗ್ ಬೇಕಾಗುತ್ತದೆ. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಮಿಟಿಯವರು ಕೊಟ್ಟ ಶಿಫಾರಸ್‌ಗಳನ್ನು ಜಾರಿಗೆ ಕೊಡುವ ಬಗ್ಗೆ ಸರ್ಕಾರ ಒಂದು ನಿರ್ಣಯ ಕೈಕೊಂಡಿದೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಸೂಕ್ತ ಕ್ರಮ ಕೈಗೊಂಡ ಮೇಲೆ ನಾವು ಕೂಡ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನನಗೆ ಅರ್ಧ ಗಂಟೆ ಮೊದಲು ಇದಕ್ಕೆ ಕೊಟ್ಟ ಉತ್ತರವೇ ಬೇರೆ ಇದೆ. ಈಗ ಮಾನ್ಯ ಮಂತ್ರಿಗಳು ಕೊಟ್ಟ ಉತ್ತರವೇ ಬೇರೆ ಇದೆ. ಆದ್ದರಿಂದ ಇವುಗಳಲ್ಲಿ ಯಾವ ಉತ್ತರ ಸರಿ ಎಂದು ನಾವು ತಿಳಿದುಕೊಳ್ಳಬೇಕು ?

ಅಧ್ಯಕ್ಷರು.—ತಾವು ಅನುಭವೀ ಶಾಸಕರು. ಆದ್ದರಿಂದ ತಾವು ಸ್ವಲ್ಪ ಸಹಕರಿಸಬೇಕು. ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಮಂತ್ರಿಗಳು ಹೊಸಬರಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್.—ಮಂತ್ರಿಗಳು ಹೊಸಬರಾದರೆ ವಿಷಯವನ್ನು ತಿಳಿದುಕೊಂಡು ಬರಬಾರದೇ ಮತ್ತು ಓದಿಕೊಂಡು ಬರಬಾರದೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಮೊದಲನೆಯ ದಿನ ಮತ್ತು ಸ್ವಲ್ಪ ಮಟ್ಟಿಗೆ ಅನುಭವ ವಾಗುವವರೆಗೆ ಅಭ್ಯಾಸ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಮಂತ್ರಿಗಳು ಓದಿಕೊಂಡು ಬರುವಂತೆ ತಾವು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಷಯದಲ್ಲಿ ನಾನು ಇಷ್ಟು ಹೇಳಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯುಕ್ತರು ಯಾವ ಯಾವ ಶಿಫಾರಸ್ಸುಗಳನ್ನು ಮಾಡುತ್ತಾರೋ ಅದೆಲ್ಲವನ್ನೂ ನಮ್ಮ ರಾಜ್ಯದಲ್ಲಿ ಜಾರಿಗೆ ತರುತ್ತೇವೆ. ಈಗ

ಸರ್ಕಾರಕ್ಕೆ ೩೮೧ ಶಿಫಾರಸ್‌ಗಳು ಬಂದಿದೆ. ಇವು ಇಷ್ಟರೊಳಗಾಗಿ ಜಾರಿಯಲ್ಲಿ ಬರದಿದ್ದರೆ ಅದಕ್ಕೆ ಜವಾಬ್ದಾರರು ಯಾರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಕೆಲವು ದಿವಸಗಳಲ್ಲಿಯೇ ನಾವು ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೇವೆ. ಇನ್ನು ಮುಂದೆ ಯಾವುದೇ ಶಿಫಾರಸ್ ಬರಲಿ, ಅದನ್ನು ನಾವು ಜಾರಿಯಲ್ಲಿ ತರುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ಎಲ್ಲ ಶಿಫಾರಸ್‌ಗಳನ್ನು ಎಷ್ಟು ದಿವಸಗಳಲ್ಲಿ ಅಥವಾ ಎಷ್ಟು ತಿಂಗಳುಗಳಲ್ಲಿ ಜಾರಿಗೆ ತರುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಬೇರೆಬೇರೆ ಖಾತೆಗಳಿಗೆ ಸಂಬಂಧಪಟ್ಟಂತೆ ಶಿಫಾರಸ್‌ಗಳು ಬಂದಿವೆ. ಈಗ ಸಿವಿಲ್ ರೈಟ್ಸ್ ಆಕ್ಟ್ ಇದೆ. ಅದರ ಕೆಳಗೆ ಕೆಲವು ಕಾನೂನು ಕ್ರಮ ಕೈಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ ೬ ತಿಂಗಳೊಳಗಾಗಿ ಇದನ್ನೆಲ್ಲಾ ಜಾರಿಗೆ ತರುತ್ತೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯುಕ್ತರು ಇಲ್ಲಿಯವರೆಗೆ ಮಾಡಿದಂಥ ಶಿಫಾರಸ್‌ಗಳ ಪೈಕಿ ಒಂದನ್ನೂ ಹಿಂದಿನ ಸರ್ಕಾರದವರು ಇಲ್ಲಿಯವರೆಗೆ ಜಾರಿಗೆ ತರಲಿಲ್ಲವೆಂಬುದು ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯವೇ ? ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿದುಕೊಂಡು ಇಲ್ಲಿ ಉತ್ತರ ಕೊಡಬೇಕೇ ಹೊರತು ಈ ಸಭೆಯನ್ನು ತಪ್ಪುದಾರಿಗೆ ಎಳೆಯುವುದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅವರ ಆದೇಶಗಳನ್ನು ಜಾರಿಯಲ್ಲಿ ತಂದಿದ್ದರೆ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನೇ ಕೇಳುತ್ತಿರಲಿಲ್ಲ. ಅವರು ಈ ಪ್ರಶ್ನೆಯನ್ನು ಕೇಳಿದ ಅರ್ಥವೇ ಇದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಮಗೆ ಬೇಕಾಗಿರುವಂತಹ ಉತ್ತರ ಇಷ್ಟೆ, ಸರ್ಕಾರಕ್ಕೆ ಬಂದಂಥ ಶಿಫಾರಸ್‌ಗಳ ಪೈಕಿ ಹಿಂದಿನ ಸರ್ಕಾರದವರು ಒಂದನ್ನೂ ಜಾರಿಗೆ ಕೊಡಲಿಲ್ಲವೆಂಬುದು ತಮ್ಮ ಅಭಿಪ್ರಾಯವೇ ಹೇಗೆ ? ತಾವು ತಪ್ಪು ಅಭಿಪ್ರಾಯವನ್ನು ಈ ಸಭೆಯ ಮೂಲಕ ಜನರಿಗೆ ಕೊಡುತ್ತಿದ್ದೀರಿ. ಈ ಹಿಂದಿನ ಸರ್ಕಾರದವರು ಯಾವ ಯಾವ ಶಿಫಾರಸ್‌ಗಳನ್ನು ಜಾರಿಗೆ ಕೊಡಲಿಲ್ಲ ಮತ್ತು ಯಾವ ಯಾವ ಶಿಫಾರಸ್‌ಗಳನ್ನು ಜಾರಿಗೆ ಕೊಟ್ಟರು ಎಂಬುದನ್ನು ಸ್ಪಷ್ಟವಾಗಿ ಈ ಸಭೆಯ ಮುಂದೆ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಯಾವುದನ್ನೂ ಜಾರಿಗೆ ತರಲಿಲ್ಲವೆಂದು ನಾನು ಹೇಳಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಈ ಪ್ರಶ್ನೆಯನ್ನು ಏನು ಕೇಳಿದ್ದಾರೆ, ಈ ಬಗ್ಗೆ ಎಲ್ಲ ವಿವರಗಳನ್ನು ಒಳಗೊಂಡಂತಹ ಒಂದು ಪೇಪರನ್ನು ಈ ಸದನದ ಮುಂದೆ ಮಂಡನೆ ಮಾಡುತ್ತೇವೆ. ಅವರು ಮಾಡಿದಂಥ ಶಿಫಾರಸ್‌ಗಳು ಯಾವುವು, ಅವುಗಳ ಪೈಕಿ ಜಾರಿಗೆ ಕೊಟ್ಟ ಶಿಫಾರಸ್‌ಗಳು ಯಾವುವು ಮತ್ತು ಉಳಿದವನ್ನು ಇನ್ನು ಎಷ್ಟು ದಿವಸಗಳಲ್ಲಿ ಜಾರಿಗೆ ಕೊಡಲಾಗುತ್ತದೆಂಬುದನ್ನು ಅದರಲ್ಲಿ ತಿಳಿಸುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತರು. ರಾಜ್ಯಪಾಲರ ಭಾಷಣದಲ್ಲಿ ಈ ವಿಷಯ ಬಂದಿದ್ದರಿಂದ ಅದರ ಒಂದು ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ನಾನಂ ಕೇಳಿದ್ದೇ ಹೊರತು ನಮ್ಮ ಸರ್ಕಾರ ಈ ಶಿಫಾರಸ್‌ಗಳನ್ನು ಜಾರಿ ಮಾಡಲಿಲ್ಲವೆಂಬ ಹಿನ್ನೆಲೆಯಲ್ಲಿ ನಾನಂ ಪ್ರಶ್ನೆ ಕೇಳಿಲ್ಲ. ತಾವು ಆ ರೀತಿ ತಿಳಿದುಕೊಂಡಿದ್ದರೆ, ಆ ಭಾವನೆಯನ್ನು ತಮ್ಮ ಮನಸ್ಸಿನಿಂದ ತೆಗೆದುಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ೩೮೧ ಶಿಫಾರಸ್‌ಗಳ ಪೈಕಿ ಆರ್ಥಿಕ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಎಷ್ಟಿವೆ, ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಎಷ್ಟಿವೆ, ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಎಷ್ಟಿವೆ ಎಂಬ ಬಗ್ಗೆ ವಿವರಗಳನ್ನು ಬೇರೆಬೇರೆಯಾಗಿ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಎಲ್ಲ ವಿವರಗಳನ್ನು ಈ ಸದನದ ಮುಂದೆ ಮಂಡಿಸುವ ಹೇಳಿಕೆಯಲ್ಲಿ ತಿಳಿಸುತ್ತೇವೆ.